**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬಸವನ ಬಾಗೇವಾಡಿ**

**ಸಿ.ಸಿ.ನಂಬರಃ 611/2023**

**ಪಿರ್ಯಾದುದಾರರುಃ** 1. ರಾಮು ತಂಃಮಾನಪ್ಪ ಲಮಾಣಿ
ವಯಸ್ಸುಃ45ವರ್ಷ
ಸಾಃಮಣೂರು ಎಲ್.ಟಿ

**ವಿರುದ್ಧ**

**ಆರೋಪಿತರುಃ** 1.ಅಪ್ಪು ತಂಃಶಂಕರ್ ಲಮಾಣಿ
ವಯಸ್ಸುಃ50ವರ್ಷ
ಸಾಃಉಪ್ಪಲದಿನ್ನಿ ಎಲ್.ಟಿ

ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ

ಪ್ರಶ್ನೆ 1 ಃ ಈ ಮೊಕದ್ದಮೆಯಲ್ಲಿ ವಿಚಾರಣೆಯಾದ ಸಾಕ್ಷಿದಾರರ ಪ್ರಮಾಣ ಪೂರ್ವಕ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆಃ2: ಫ್ರಾಸಾ-1 ರಾಮು ಲಮಾಣಿ ತಮ್ಮ ಸಾಕ್ಷ್ಯದಲ್ಲಿ, ತಾನು ಮತ್ತು ನೀವು ಇಬ್ಬರು ಹತ್ತಿರ ಸಂಬಂಧಿಗಳಾಗಿದ್ದು, ನಿಮಗೆ ಆರ್ಥಿಕ ತೊಂದರೆಯಾಗಿದ್ದರಿಂದ ಫ್ರಾಪಂಚಿಕ ಅಡಚಣೆ ಉಂಟಾದಾಗ ಅವಶ್ಯಕತೆಗಾಗಿ ತನ್ನ ಹತ್ತಿರ ರೂ.9,00,000/- ರೂಪಾಯಿಗಳನ್ನು ಅಜಿತ್ ತಂಃವಾಲು ಲಮಾಣಿ ಮತ್ತು ರಮೇಶ ತಂಃಉಮಲು ಲಮಾಣಿ ಇವರ ಸಮಕ್ಷಮ ದಿಃ27.07.2021 ರಂದು ಪಡೆದುಕೊಂಡಿದ್ದು, ನಂತರ ತಾನು ಸದರಿ ಹಣವನ್ನು ಮರಳಿ ಕೊಡುವಂತೆ ಕೇಳಿದಾಗ ನೀವು ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಬಸವನ ಬಾಗೇವಾಡಿ, ದಿಃ01.03.2023 ರಂದು ಚೆಕ್ಕು ನಂಬರ 571807ರಲ್ಲಿ 9,00,000/-ರ ಬ್ಯಾಂಕಿನ ಚೆಕ್ಕನ್ನು ತನ್ನ ಹೆಸರಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಾನು ತನ್ನ ಖಾತೆ ಇರುವ ಕೆನರಾ ಬ್ಯಾಂಕ್ ಶಾಖೆ ಬಸವನ ಬಾಗೇವಾಡಿ ಇವರಿಗೆ ಕಲೆಕ್ಷನಗಾಗಿ ದಿಃ04.03.2023 ರಂದು ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ತಾವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ3: ಫ್ರಾಸಾ-1 ರಾಮು ಲಮಾಣಿರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಕೆನರಾ ಬ್ಯಾಂಕ್ ಶಾಖೆ ಬಸವನ ಬಾಗೇವಾಡಿ ಇವರು, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಅಂತಾ ಚೆಕ್ಕನ್ನು ಮರಳಿ ಹಿಂಬರಹದೊಂದಿಗೆ ದಿಃ06.03.2023 ರಂದು ತನಗೆ ಕೊಟ್ಟಿದ್ದು ಇರುತ್ತದೆ, ಆದ್ದರಿಂದ ತಾನು ತನ್ನ ಚೆಕ್ಕಿನ ಹಣ ವಸೂಲಿ ಮಾಡುವ

ಸಲುವಾಗಿ ತನ್ನ ವಕೀಲರ ಮುಖಾಂತರ ದಿಃ23.03.2023 ರಂದು ಹಣ ಕೊಡುವಂತೆ ಕೇಳಿ 15 ದಿನಗಳ ಕಾಲಾವಕಾಶ ನೀಡಿ ನಿಮಗೆ ನೋಟೀಸು ಕಳುಹಿಸಿದ್ದರೂ ಸಹ, ಸದರಿ ನೋಟಿಸನ್ನು ನೀವು ದಿಃ25.03.2023 ಸ್ವೀಕರಿಸಿದ್ದರೂ ಸದರಿ ನೋಟಿಸಿಗೆ ದಿಃ27.03.2023 ರಂದು ನಿಮ್ಮ ವಕೀಲರ ಮೂಲಕ ಉತ್ತರವನ್ನು ನೀಡಿದ್ದು ಮತ್ತು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ತಿಳಿದೂ ತಿಳಿದೂ ತನಗೆ ಮೋಸ ಮಾಡಿಬೇಕೆಂಬ ದುರುದ್ದೇಶದಿಂದ ಈ ರೀತಿ ಚೆಕ್ಕು ನೀಡಿರುವುದರಿಂದ, ನಿಮ್ಮ ಮೇಲೆ ಯೋಗ್ಯ ಕಾನೂನುಕ್ರಮ ಕೈಗೊಳ್ಳಬೇಕಾಗಿ, ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ತಾವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ04: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?

ಆರೋಪಿಯ ಉತ್ತರಃ

ಪ್ರಶ್ನೆಃ05: ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?

ಆರೋಪಿಯ ಉತ್ತರಃ

ಪ್ರಶ್ನೆಃ06: ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?

**ಆರೋಪಿಯ ಉತ್ತರಃ**

(ಮೇಲಿನ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ **ದಿಃ**____________ರಂದು ದಾಖಲಿಸಿಕೊಳ್ಳಲಾಗಿದೆ)

**ಸ್ಥಳಃಬಸವನ ಬಾಗೇವಾಡಿ** (ತೇಜಸ್ವಿನಿ ಸೊಗಲದ)

ದಿಃ_____/____/**2024** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

**ಬಸವನ ಬಾಗೇವಾಡಿ.**